5. ಅಧ್ಯಕ್ಷರ ಟಪ್ಪಣಿ ಮೇರೆಗೆ

ವಿಷಯ: (ಅ) ಉಡುಪಿ ಜಿಲ್ಲೆ ಪಂಚಾಯಿತಿ ಇಂಜಿನಿಯರಿಂಗ್ ವಿಭಾಗದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ.

ಶ್ರೀ ಡಿ.ಎ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ಇವತ್ತು ಭ್ರಷ್ಟಾಚಾರ ಇದೊಂದು ಸಾರ್ವಜನಿಕರ ನಿತ್ಯಜೀವನ ಅವಿಭಾಜ್ಯ ಅಂಗವೆಂದು ಹೇಳುವಂತಹದ್ದನ್ನು ನಾವು ದಿನನಿತ್ಯ ನೋಡುತ್ತಿದ್ದೇವೆ. ಬಹುಶಃ ಇತ್ತೀಚಿನ ದಿನಗಳಲ್ಲಿ ಲೋಕಾಯುಕ್ತರ ಧಾಳಿಯನ್ನು ನಾವು ನೋಡುತ್ತಿದ್ದೇವೆ. ಅದರ ಒಂದು ಸುದ್ದಿ ಪತ್ರಿಕೆಗಳಲ್ಲಿ ಬಂದಂತಹ ವಿಚಾರಗಳು ನಮಗೆಲ್ಲಾ ಗೊತ್ತಿದೆ. ಇದಕ್ಕಿಂತ ಹೆಚ್ಚಾಗಿ ಏನಾಗಿದೆ ಅಂದರೆ ಉಡುಪಿ ಜಿಲ್ಲೆಯ ಜಿಲ್ಲಾಪಂಚಾಯಿತಿ ಇಂಜಿನಿಯರಿಂಗ್ ವಿಭಾಗದಲ್ಲಿ ಅಲ್ಲಿನ ಕಾಮಗಾರಿಗಳಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿದೆ. ಹೀಗೆ ನಡೆದಿದೆ ಅಂದರೆ ಮಾಡದ ಕೆಲಸಗಳಿಗೆ ಬಿಲ್ಲು, ಕೆಲಸ ಮಾಡಿದ್ದಕ್ಕೆ ಬಿಲ್ಲು, ಹೇಗೆ ಬೇರೆ ಬೇರೆ ನಿಧಿಯಿಂದ ಅದೇ ಕೆಲಸಗಳಿಗೆ ಅಲಾಟ್‌ಮೆಂಟ್ ಆದ ಹಣದಲ್ಲಿ ಬಿಲ್ಲು. ಈ ರೀತಿಯಾಗಿ 3 ಕೋಟಿಗಿಂತ ಜಾಸ್ತಿ ವಂಚನೆ ಮಾಡಿದ್ದಾರೆಂಬುದು ನಮಗೆಲ್ಲಾ ಗೊತ್ತಾಗಿದೆ. ನಾನು ಇದನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಭಾರೀ ಒತ್ತಡದ ಮೇಲೆ ಅಂದರೆ ಉಡುಪಿಯಿಂದ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಡೆಲಿಗೇಷನ್ ಬಂದು ಅದನ್ನು ಸಂಬಂಧಪಟ್ಟವರಲ್ಲಿ ಮಾತನಾಡಿ ಇದನ್ನು ಮುಚ್ಚಿ ಹಾಕಬೇಕೆಂದು ಅಂತಹ ಒಂದು ಪ್ರಯತ್ನ ನಡೆಯುತ್ತಿದೆ. ವಿಶೇಷವಾಗಿ ಇದಕ್ಕೆ ಭಾರೀ ಒತ್ತಡವಿದೆಯೆಂದು ನಾನು ಕೇಳಿದೆ. ಕಾಪು ವಿಧಾನಸಭಾ ಕ್ಷೇತ್ರದಲ್ಲಿ ....

ಶ್ರೀ ಡಿ.ಬಿ.ಚಂದ್ರೇಗೌಡ : ಯಾವ ವಿಚಾರಗಳನ್ನು ಬೇಕಾದರೂ ಪ್ರಸ್ತಾಪ ಮಾಡಿ. ಮಾನ್ಯ ವೇಳೆಯಲ್ಲಿ ಅವರಿಗೆ ಒಂದು ಕಾಪಿ ಕೊಡಿ. ಸರ್ಕಾರಕ್ಕೆ ಅದರ ಕಾಪಿ ಬಂದಿಲ್ಲ.

ಶ್ರೀ ಡಿ.ಎ. ಸದಾನಂದಗೌಡ : ನಾನು ಗ್ರಾಮೀಣಾಭಿವೃದ್ಧಿ ಸಚಿವರಿಗೆ ಕಳುಹಿಸಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಈ ವಿಚಾರ ತನಿಖೆಯ ಹಂತದಲ್ಲಿರುತ್ತದೆ. ಸಿಓಡಿ ತನಿಖೆಯಲ್ಲಿದೆಯೋ ಲೋಕಾಯುಕ್ತದ ತನಿಖೆಯಲ್ಲಿದೆಯೋ it is a matter to be examined in detail by the Government. ಈಗ ತನಿಖೆಯಲ್ಲಿರತಕ್ಕ ವಿಚಾರಗಳನ್ನು ತೆಗೆದುಕೊಂಡು ಬಂದು ಶೂನ್ಯವೇಳೆಯಲ್ಲಿ ಎತ್ತಿಬಿಟ್ಟರೆ, ಹೇಗೆ? ತಮ್ಮಲ್ಲಿ ನನ್ನ ಪ್ರಾರ್ಥನೆ ಇಷ್ಟೆ, ಯಾವುದೇ ವಿಚಾರವನ್ನು, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ಅದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ಕೋರ್ಟಿನಲ್ಲಿದ್ದರೆ ಇಲ್ಲಿ ಅಲೌ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಪ್ರಶ್ನೆ ಕಳುಹಿಸುತ್ತಾರೆ, ತಾವು ಅದನ್ನು ಅಲೌ ಮಾಡುತ್ತೀರಿ. ನಮ್ಮ ಅಭ್ಯಂತರ ಇಲ್ಲ. ಆದರೆ ಯಾವುದನ್ನು ಚರ್ಚೆ ಮಾಡಬೇಕು ಯಾವುದನ್ನು ಚರ್ಚೆ ಮಾಡುವುದು ಬೇಡವೆಂದು ನಾವು ತಮಗೆ ಸಲಹೆ ಕೊಡಬೇಕಲ್ಲಾ.

ಅಧ್ಯಕ್ಷರು: ಕೋರ್ಟ್ ಮುಂದೆ ಇಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಡಿ.ಎ. ಸದಾನಂದಗೌಡ : ಇದು ಕೋರ್ಟ್ ಮುಂದೆ ಇಲ್ಲ. ಅದನ್ನು ನಾನು ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅಧ್ಯಕ್ಷರೆ, ಇದೆಲ್ಲಾ these are all certain administrative matters. ಇದನ್ನು ಶೂನ್ಯವೇಳೆಯಲ್ಲಿ ಎತ್ತಿಬಿಟ್ಟರೆ, ಇದು ಸರ್ಕಾರಕ್ಕೆ ಗೊತ್ತು ಇರುವುದಿಲ್ಲ.

ಅಧ್ಯಕ್ಷರು: ಸಂಬಂಧಪಟ್ಟ ಆರ್‌ಡಿಪಿಆರ್ ಮಂತ್ರಿಗಳಿಗೆ ನೋಟೀಸ್ ಕಳುಹಿಸಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ನಾವು ನೋಟೀಸನ್ನು ಎರಡು ದಿವಸಗಳ ಹಿಂದೆ ಕಳುಹಿಸಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಿಲುವಳಿ ಸೂಚನೆ ಈಗ ಬಂದಿದೆ. ಕಾಪಿಯನ್ನು ನಮಗೆ ಕಳುಹಿಸಿ ಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್: ಒಂದು ಗಂಟೆಗೆ ಮುಂಚೆ ಕೊಟ್ಟಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸಂಬಂಧಪಟ್ಟ ಮಂತ್ರಿಗಳಿಗೆ ಕಾಪಿಯನ್ನು ಕಳುಹಿಸಬೇಕು. ಕಾಪಿ ಕಳುಹಿಸದೆ ಉತ್ತರ ಹೇಳಿ ಅಂದರೆ ಹೇಗೆ?

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾವು ಹೋಗಿ ನೋಟೀಸನ್ನು ಅವರಿಗೆ ಸರ್ವ್ ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು: ತಾವು ದಯವಿಟ್ಟು ರೂಲ್ಸನ್ನು ನೋಡಿ. ಯಾರು ನೋಟೀಸ್ ಕೊಡುತ್ತಾರೆ ಅವರೇ ಕಾಪಿಯನ್ನು ಕಳುಹಿಸಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾನು ಕೇಳತಕ್ಕದ್ದು, ಈ ಸಭೆ ಇರತಕ್ಕದ್ದು, ಈ ಸಭೆಯ ನಡವಳಿಕೆ ಇರತಕ್ಕದ್ದು ಈ ಸಭೆಯಲ್ಲಿ ಚರ್ಚೆಯಾಗತಕ್ಕದ್ದು ಎಲ್ಲವೂ ಸಹಿತ ಕರ್ನಾಟಕ ರಾಜ್ಯದ ಸಾರ್ವಜನಿಕ ಹಿತದೃಷ್ಟಿಯಿಂದ.

12.00 ಪಿ.ಎಂ.

ಶ್ರೀ ಡಿ.ಬಿ. ಚಂದ್ರೇಗೌಡ: ಹಾಗಾದರೆ ರೂಲ್ಸ್ ಬುಕ್‌ನ್ನು ಮುಚ್ಚಿಬಿಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾವೇನೂ ಹೇಳಲೇ ಇಲ್ಲ. ಹಾಗಾದರೆ ಅವರು ನಾವು ಹೇಳಿರತಕ್ಕಂಥ ಸ್ಟೇಟ್‌ಮೆಂಟ್‌ನ್ನು ಕಾಂಟ್ರಾಡಿಕ್ಟ್ ಮಾಡುತ್ತಿದ್ದಾರಾ? ಸಾರ್ವಜನಿಕರ ಹಿತದೃಷ್ಟಿಯಿಂದ ಅಲ್ಲವೇ ಈ ಸಭೆ ಇರುವುದು, ನಾವು ಇಲ್ಲಿ ಚರ್ಚೆ ಮಾಡುತ್ತಿರುವುದು? ಇವತ್ತು ಕೋಟ್ಯಾಂತರ ರೂಪಾಯಿಗಳನ್ನು ಕಳೆದುಕೊಂಡು ಜನರು ರಕ್ಷಣೆ ಕೇಳುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸರ್ಕಾರದವರು ಜನರಿಗೆ ರಕ್ಷಣೆ ಕೊಡಬೇಕು ಎಂದು ಮಾನ್ಯ ಉಪನಾಯಕರು ಈ ವಿಚಾರವನ್ನು ಎತ್ತಿದ್ದಾರೆ. ಅದಕ್ಕೆ ದಯವಿಟ್ಟು ತಾವು ತೆಗೆದುಕೊಂಡಿರತಕ್ಕಂಥ ನಿರ್ಣಯ ಏನಿದೆ ಅದು ಸರಿಯಾದ ನಿರ್ಣಯ. ತಮ್ಮ ನಿರ್ಣಯ ಪ್ರಕಾರ ಅವರು ಹೇಳಿರತಕ್ಕಂಥಾದ್ದು.

ಅಧ್ಯಕ್ಷರು : ಅದು ಕೋರ್ಟು ಮುಂದೆ ಇದೆಯಾ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದು ಕೋರ್ಟಿನ ಮುಂದೆ ಏನೂ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸಿಂಧ್ಯಾರವರೇ, ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ; ನಾನು ಈ ವಿಚಾರವನ್ನು ಏಕೆ ಪ್ರಸ್ತಾಪ ಮಾಡಿದೆ ಎಂದರೆ ತಾವು ಸಾಕಷ್ಟು ಅನುಭವ ಇರತಕ್ಕಂಥವರು. ನೀವು ನಮಗೆ ಮಾರ್ಗದರ್ಶನ ಮಾಡಬೇಕಾದವರು. The matter is already befoer Lokayuktha for enquiry. ಮೂರು ಜನ ಅಧಿಕಾರಿಗಳು ಸಸ್ಪೆಂಡ್ ಆಗಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ : ನಾವು ಹೇಳಿದಮೇಲೆ ಇದು ಹೌದಾ, ಅಲ್ವಾ ಅಂತ ಹೇಳಿ. ನಾನು ಇದನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ .....

(ಗೊಂದಲ)

ಶ್ರೀ ಸಿ. ಚೆನ್ನಿಗಪ್ಪ : ಅನ್ಯಾಯ ಆಗಿರುವ ವಿಚಾರವನ್ನು ನಾವು ನಿಮ್ಮ ಮೂಲಕ ಸರ್ಕಾರಕ್ಕೆ ತಿಳಿಸಬೇಕಲ್ವಾ?

(ಗೊಂದಲ)

ಅಧ್ಯಕ್ಷರು: ಮಾನ್ಯ ಸದಾನಂದಗೌಡ ಮಾತನಾಡುತ್ತಿದ್ದಾರೆ. ನಾನು ಅವರಿಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಡಿ.ವಿ. ಸದಾನಂದಗೌಡ: ಲೋಕಾಯುಕ್ತಕ್ಕೆ ಸಂಬಂಧಪಟ್ಟಂತೆ ನಿಮ್ಮ ಇಂಜಿನಿಯರುಗಳು ಸಸ್ಪೆಂಡ್ ಆಗಿರುವ ವಿಚಾರ ನಾನು ಮಾತನಾಡುವಂಥಾದ್ದು ಅಲ್ಲ. ದಯವಿಟ್ಟು ತಾವು ಸ್ವಲ್ಪ ಕೇಳಿಸಿಕೊಳ್ಳಬೇಕು. ನೀವು ಕೇಳದೇ ಪ್ರಶ್ನೆ ಮಾಡಿದರೆ ಹೇಗೆ? ಇದರಲ್ಲಿ ಏನಾಗಿದೆ ಎಂದರೆ ಇಲ್ಲಿಯ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಸ್ವತಃ ಅವರೇ ಕಂಟ್ರಾಕ್ಟರ್ ಆಗಿ, ಅವರೇ ಭಾಗಿಗಳಾಗಿದ್ದು ಈಗ ವಿಚಾರಣೆ ಮಾಡುವಂಥ ಹಂತದಲ್ಲಿ ಅವರೇ' ಅಧ್ಯಕ್ಷರಾಗಿ ಮುಂದುವರಿಯುವಂಥ ಸಂದರ್ಭ ಇದೆ. ನಮಗೆ ಗೊತ್ತಿದೆ, ಮೊನ್ನೆಮೊನ್ನೆ ಕಡತಗಳನ್ನು ಬೆಂಕಿಗೆ ಹಾಕಿದರು. ಯಾರ ಕಸ್ಟಡಿಯಲ್ಲಿ ಕಡತಗಳು ಇರುತ್ತವೆ ಅವುಗಳನ್ನು ಬೆಂಕಿಗೆ ಹಾಕಬಹುದು ತನಿಖೆಯಾಗುವಾಗ. ಇವತ್ತು ಅಲ್ಲಿಯ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಸ್ವತಃ ಅವರೇ ಕಾಂಟ್ರಾಕ್ಟ್ ಮಾಡಿದ್ದನ್ನು ನಾನು ಉದಾಹರಣೆ ಕೊಡುತ್ತಿದ್ದೇನೆ. ಅವರೇ ಈಗ ಅಧ್ಯಕ್ಷರಾಗಿ ಮುಂದುವರಿಯುತ್ತಿದ್ದಾರೆ. ತಾವು ಹೇಳುತ್ತೀರಿ ಇದನ್ನು ಲೋಕಾಯುಕ್ತಕ್ಕೆ ಒಪ್ಪಿಸಿದ್ದೇವೆ ಎಂದು. ಆದರೆ ಕಡತಗಳು ಯಾರಲ್ಲಿ ಉಂಟು? ಅಲ್ಲಿಯ ಜಿಲ್ಲಾ ಪಂಚಾಯತ್ ಅಧ್ಯಕ್ಷರ ಕಸ್ಟಡಿಯಲ್ಲಿ ಇವತ್ತು ಕಡತಗಳು ಉಂಟು. ಅವರೇ ಅಧ್ಯಕ್ಷ ಸ್ಥಾನದಲ್ಲಿ ಮುಂದುವರೆದರೆ ನಾಳೆ ಆ ಕಡತಗಳನ್ನು ಬೆಂಕಿಗೆ ಹಾಕಿದರೆ ನೀವು ಲೋಕಾಯುಕ್ತಕ್ಕೆ ರೆಫರ್ ಮಾಡಿದ್ದಕ್ಕೆ ಏನು ಪ್ರಯೋಜನ ಬರುತ್ತದೆ?

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ, ಕೆಲವು ನಿರ್ದಿಷ್ಟವಾಗಿ ನಿಯಮಗಳು ಇವೆ. ಆ ನಿಯಮಗಳು ಏನು ಎಂದರೆ ಕೆಲವು ಸ್ವಾಯತ್ತ ಸಂಸ್ಥೆಗಳು ಇವೆ. ಇನ್ನು ಕೆಲವು

ವಿಚಾರಣೆ ಹಂತದಲ್ಲಿವೆ. ಅದರಲ್ಲಿ ಸರ್ಕಾರ ಹೋಗಿ ಫೈಲನ್ನು ಹಿಡಿದುಕೊಂಡು ಬರುವುದಕ್ಕೆ ಆಗುತ್ತದೆಯಾ? ಆದ್ದರಿಂದ ಯಾವುದನ್ನು ಚರ್ಚೆ ಮಾಡಬೇಕೇ, ಬೇಡವೇ ಎಂದು ನಿರ್ಧಾರ ಮಾಡುವುದು ತಮಗಾದರೂ ಇರಬೇಕಲ್ವಾ?

ಅಧ್ಯಕ್ಷರು: ಕೋರ್ಟು ಮುಂದೆ ಇಲ್ಲ. ಇದು ಬಹಳ ಮುಖ್ಯವಾದ ವಿಚಾರ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇಲ್ಲ ಎಂದು ತಾವು ಹೇಳುವುದಕ್ಕೆ ಮುಂಚೆ ಸರ್ಕಾರದ ಅಭಿಪ್ರಾಯವನ್ನು ಕೇಳಬೇಕಲ್ಲಾ? ಯಾವ ವಿಚಾರವನ್ನು ಅವರು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ ಎಂಬುದು ನಮಗೆ ಗೊತ್ತಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ನಿಮ್ಮ ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಗೆ ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು: ಸಂಬಂಧಪಟ್ಟ ಮಂತ್ರಿಗಳಿಗೆ ಅದನ್ನು ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಡಿ.ವಿ. ಸದಾನಂದಗೌಡ: ನಾನು ಮೂರು ದಿವಸಗಳ ಹಿಂದೆ ನೋಟೀಸ್ ಕೊಟ್ಟಿದ್ದೇನೆ. ಇವತ್ತು ಅದೇ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಡೆಲಿಗೇಷನ್ ಹಿಡಿದುಕೊಂಡು ಬಂದಿದ್ದಾರೆ. ನಾನು ಏಕೆ ಇದನ್ನು ಇಷ್ಟೊಂದು ಪ್ರಾಮುಖ್ಯವಾಗಿ .....

(ಗೊಂದಲ)

ಅಧ್ಯಕ್ಷರು: ನೀವು ರಿಪ್ಲೈ ಹೇಳಬೇಕಾಗಿಲ್ಲ. ಸಂಬಂಧಪಟ್ಟ ಮಂತ್ರಿಗಳು ಇಲ್ಲದಿದ್ದರೆ ತಾವೇನೂ ರಿಪ್ಲೈ ಹೇಳಬೇಕಾಗಿಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ: ಇದರಲ್ಲಿ ಸಬ್‌ಜ್ಯುಡಿಸ್ ಇರುವಾಗ should we not raise it? should you not hear the government?

ಅಧ್ಯಕ್ಷರು: ಅವರು ಇಲ್ಲ ಎಂದು ಹೇಳುತ್ತಿದ್ದಾರಲ್ಲಾ?

ಶ್ರೀ ಡಿ.ಬಿ. ಚಂದ್ರೇಗೌಡ: ಸರ್ಕಾರ ಹೇಳುವುದು ಬೇಡವೆ?

ಅಧ್ಯಕ್ಷರು: ಹಾಗಿದ್ದರೆ ಸಂಬಂಧಪಟ್ಟ ಮಂತ್ರಿಗಳು ಬಂದು ಹೇಳಬೇಕಾಗಿತ್ತು. ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಬಂದು ಇದು ಕೋರ್ಟಿನ ಮುಂದೆ ಇದೆ ಎಂದು ಹೇಳಬೇಕಾಗಿತ್ತು.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ : ಹಾಗಾದರೆ ಯಾವ ವಿಚಾರಗಳನ್ನೂ ಇಲ್ಲಿ ಮಾತನಾಡುವ ಹಾಗಿಲ್ವಾ?

ಅಧ್ಯಕ್ಷರು : ಮಾನ್ಯ ಚಂದ್ರೇಗೌಡರೇ, ಸಂಬಂಧಪಟ್ಟ ಮಂತ್ರಿಗಳಿಗೆ ನಾನು ಕಳುಹಿಸಿ ಕೊಟ್ಟಿದ್ದೇನೆ. ಇದು ಕೋರ್ಟಿನ ಮುಂದೆ ಇದೆ ಎಂದು ಅವರು ಹೇಳಿದ್ದರೆ ನಾನು ಸ್ಟಾಪ್ ಮಾಡಿಸುತ್ತಿದ್ದೆ. ಅವರು ಬರದೇ ಇದ್ದರೆ ನಾನೇನು ಮಾಡಲಿ? ನೀವು ಬೇಗ ಮುಗಿಸಿ.

ಶ್ರೀ ಡಿ.ವಿ. ಸದಾನಂದಗೌಡ : ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ನಿಯಮ 286ರ ಪ್ರಕಾರ ಯಾವುದೇ ಒಬ್ಬ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಯಾವ ಕಾಮಗಾರಿಗಳನ್ನೂ ಅವರ ಹೆಸರಿನಲ್ಲಿ ಅಥವಾ ಅವರಿಗೆ ಸಂಬಂಧಪಟ್ಟವರ ಹೆಸರಿನಲ್ಲಿ ಮಾಡಬಾರದು ಎಂದಿದೆ. ಆ ಕಾಮಗಾರಿಗಳಲ್ಲಿ ಅವ್ಯವಹಾರವಾಗಿದೆ ಎಂದು ಹೇಳಿಬಾಗ ಅವರನ್ನು ಏನು ಮಾಡಬೇಕು? ಅವನನ್ನು ವಜಾ ಮಾಡಬೇಕು ಅಥವಾ ಅವರ ಬಗ್ಗೆ ತನಿಖೆ ಮಾಡಬೇಕು. ಮಾನ್ಯ ಅಧ್ಯಕ್ಷರೇ, ಇಲ್ಲಿ ಏನಾಗಿದೆ? ಜಿಲ್ಲಾ ಪಂಚಾಯತ್ ಅಧ್ಯಕ್ಷರು ಮತ್ತು ಸದಸ್ಯರುಗಳು ಇಲ್ಲಿ ಗುತ್ತಿಗೆದಾರರು. ರಾತ್ರಿ ಕಾವಲುಗಾರ ಒಬ್ಬ ಅಲ್ಲಿರುವಂಥವನು.....

Sri. D.B. Chandregowda: I take serious objection for this. They are all autonomous institutions.

(ಗೊಂದಲ)

ಅಧ್ಯಕ್ಷರು : ನೋಡಿ, ಏನೂ ಬರೆದುಕೊಳ್ಳಬೇಡಿ. ಐದಾರು ಜನ ಒಟ್ಟಿಗೆ ಮಾತನಾಡಿದರೆ ಏನೂ ಬರೆದುಕೊಳ್ಳಬೇಡಿ. ನಾನು ಯಾರಿಗೆ ಅಲೋ ಮಾಡುತ್ತೇನೆ, ಅವರು ಮಾತ್ರ ಮಾತನಾಡಲಿ. ನಾವು ಇಲ್ಲಿ ಯಾರಿಗೂ ರಕ್ಷಣೆ ಕೊಡುತ್ತಿಲ್ಲ. ನ್ಯಾಯವಾದ ರೀತಿಯಲ್ಲಿ ಹೋಗುತ್ತಿದ್ದೇವೆ.

(ಗೊಂದಲ)

ಮಾನ್ಯ ಸದಸ್ಯರು: ರಕ್ಷಣೆ ಮಾಡುವ ಪಿತೂರಿ ಇದು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಸಂಸದೀಯ ವ್ಯವಹಾರ ಮಂತ್ರಿಯಾಗಿ ನಾನು ನನ್ನ ಕೆಲಸವನ್ನು, ಕರ್ತವ್ಯವನ್ನು ಮಾಡಬೇಕು, ಮಾಡುತ್ತಿದ್ದೇನೆ. ದಯವಿಟ್ಟು ಕೇಳಿ. ನೀವು ಹೇಳಿದ ತಕ್ಷಣ ಅದನ್ನೆಲ್ಲಾ ಸರ್ಕಾರ ಒಪ್ಪಿಕೊಳ್ಳಬೇಕೆಂದೇನೋ ಇಲ್ಲ. ಎರಡು ವಿಚಾರಗಳನ್ನು ಇಲ್ಲಿ ನಾನು ಪ್ರಸ್ತಾಪ ಮಾಡಿದ್ದೇನೆ. ಒಂದು, ಇದೇ ವಿಚಾರವನ್ನು ಲೋಕಾಯುಕ್ತದ ತನಿಖೆಗೆ ಒಳಪಡಿಸಿದ್ದೇವೆ ಎಂಬುದು ನನಗೆ ಸಿಕ್ಕಿರತಕ್ಕಂಥ ಮಾಹಿತಿ. ಸಂಬಂಧಪಟ್ಟ ಮೂರು ಜನ ಇಂಜಿನಿಯರುಗಳನ್ನು ಸಸ್ಪೆಂಡ್ ಮಾಡಿದ್ದೇವೆ ಎಂಬುದು ನನಗೆ ಸಿಕ್ಕಿರತಕ್ಕಂಥ ಮಾಹಿತಿ. ಇದು ಒಂದು. ಇನ್ನೊಂದು ವಿಚಾರ ಏನೆಂದರೆ ತನಿಖೆ ನಡೆಯುತ್ತಾ ಇರತಕ್ಕಂಥ ಘಟ್ಟದಲ್ಲಿ ನಾವು ಚರ್ಚೆ ಮಾಡುವುದರಿಂದ - it influences the enquiry- ಎನ್ನುವುದು ಇನ್ನೊಂದು. ಎರಡನೆಯದು ಏನೆಂದರೆ, ಇವೆಲ್ಲಾ ಸ್ವಾಯತ್ತ ಸಂಸ್ಥೆಗಳಾಗಿರುವಾಗ, ಆ ಜಿಲ್ಲಾಪಂಚಾಯತ್‌ಗಳಲ್ಲಿ ನಡೆಯತಕ್ಕಂಥ ವಿಚಾರಗಳನ್ನು ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆಯೆಂದು ಹೇಳಿ ಚರ್ಚೆ ಮಾಡಬಹುದು ಅಂತಾದರೆ ನಮ್ಮದು ಅಭ್ಯಂತರ ಇಲ್ಲ. ಆದರೆ ಅದೇ ಕೆಲಸವನ್ನು

ಮಾಡಬೇಕಾಗುತ್ತದೆ, ಬೇರೆ ಯಾವುದೇ ಕೆಲಸ ಮಾಡುವಹಾಗಿಲ್ಲ. ಆದ್ದರಿಂದ ಈ ವಿಚಾರಗಳನ್ನು ತಾವು ಗಮನದಲ್ಲಿಟ್ಟುಕೊಂಡು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಶ್ನೆಯನ್ನು ಪರಿಗಣಿಸಬೇಕು.

(ಗೊಂದಲ)

ಅಧ್ಯಕ್ಷರು:- ಲೋಕಾಯುಕ್ತದ ಮುಂದೆ ಇದೆ ಎಂದು ಅವರು ಹೇಳುತ್ತಿದ್ದಾರೆ. We will verify it. I will verify the records. ಸರ್ಕಾರದವರು ಆ ರೀತಿ ಹೇಳುತ್ತಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ:- ಒಂದು ನಿಮಿಷ ಕೇಳಿ. ನಾನು ಹೇಳುತ್ತೇನೆ, ಲೋಕಾಯುಕ್ತ.....

ಅಧ್ಯಕ್ಷರು:- ಅವರು ಇದು ಲೋಕಾಯುಕ್ತದ ಮುಂದೆ ಹೋಗಿ ಸಸ್ಪೆಂಡ್ ಮಾಡಿದ್ದಾರೆ ಎಂದು ಹೇಳುವಾಗ- I will verify the records. ಸಂಸದೀಯ ಮಂತ್ರಿಗಳು ಏನು ಹೇಳಿದರು ಎಂದರೆ ಮೂರು ಜನರನ್ನು ಅವರ ಕಂಪ್ಲೇಂಟ್‌ನ ಮೇಲೆ ಸಸ್ಪೆಂಡ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದ್ದರಿಂದ ನೀವು ದಯವಿಟ್ಟು ನಿಲ್ಲಿಸಿ.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ:- ಲೋಕಾಯುಕ್ತಕ್ಕೆ ರೆಫರ್ ಮಾಡಿದ ಅಧಿಕಾರಿಗಳ ಬಗ್ಗೆ ನಾನು ಮಾತನಾಡುತ್ತಿಲ್ಲ. ಅಧ್ಯಕ್ಷರು ಮಾಡುತ್ತಿದ್ದಾರೆ ಎಂದು ನಾನು ಮಾತನಾಡುತ್ತಿದ್ದೇನೆ.

Mr. Speaker:- The entire question is before Lokayuktha. When the question is before Lokayuktha, I can't allow. ನೋಡಿ, ಸರ್ಕಾರದಿಂದ ಈಗ ಇದು ಲೋಕಾಯುಕ್ತದ ಮುಂದಿದೆ ಎಂದು ಗೊತ್ತಾಗುತ್ತಿದೆ. Now, I can't allow, Before that I did not know.

ಶ್ರೀ ಎಸ್. ಸುರೇಶ್ ಕುಮಾರ್:- ಈಗ ಶೂನ್ಯವೇಳೆಯಲ್ಲಿ ಯಾವುದೇ ಒಂದು ವಿಷಯ ಪ್ರಸ್ತಾಪ ಮಾಡಿದರೆ ಅದು ಲೋಕಾಯುಕ್ತದ ಮುಂದೆ ಇದೆ, ಅದರ ಮೇಲೆ ಏನೋ ಪರಿಣಾಮ ಆಗಿ ಬಿಡುತ್ತದೆ, ಆದಕ್ಕೋಸ್ಕರ ಬಿಡುವುದಿಲ್ಲ ಎಂದು ಸನ್ಮಾನ್ಯ ಕಾನೂನು ಸಚಿವರಾದ ಶ್ರೀ ಚಂದ್ರೇಗೌಡರು ಇಲ್ಲಿ ನಮಗೆಲ್ಲಾ ಹೇಳಿದ್ದಾರೆ. ಶೂನ್ಯವೇಳೆ ತರಹ ಒಂದು ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬಂದರೆ ಹೇಗೆ? ನಿಲುವಳಿ ಸೂಚನೆಯಲ್ಲಿ ರಿಕ್ವಿಸಿಟ್ಸ್ ಏನು ಎಂಬುದು ಬಹಳ ಕ್ಲಿಯರ್ ಆಗಿದೆ. ಅದರಲ್ಲಿ ಕೋರ್ಟ್ ಬಿಟ್ಟು ಬೇರೆ ಯಾವುದಾದರೂ ಇದೆಯಾ? ನಿಲುವಳಿ ಸೂಚನೆಯ ನೀವು ಅವಕಾಶ ಕೊಟ್ಟ ಮೇಲೆ ಶೂನ್ಯವೇಳೆಯಲ್ಲಿ ಏಕೆ ಅವಕಾಶ ಕೊಡುವುದಿಲ್ಲ.

Mr. Speaker: Tribunal, Judicial authority, or any court in India ಎಂದು ಇದೆ.

ಶ್ರೀ ಎಸ್. ಸುರೇಶ್ ಕುಮಾರ್: ಲೋಕಾಯುಕ್ತ ಟ್ರಿಬ್ಯುನಲ್ಲಾ? ಅದು ಜ್ಯುಡಿಷಿಯಲ್ ಕೋರ್ಟಾ ?

Mr. Speaker:- That is a Judicial authority.

ಶ್ರೀ ಎಸ್. ಸುರೇಶ್ ಕುಮಾರ್:- ಅವರು ತೀರ್ಮಾನ ಕೊಡುವುದಿಲ್ಲ ಸರ್. lokayuktha is another police station. ಅವರು ಇನ್ವೆಸ್ಟಿಗೇಷನ್ ಮಾಡುತ್ತಾರೆ.

Mr. Speaker:- Don't call it as police staion.

Sri. R. Somashekar:- Lokayuktha is an investigaiton agency. It is not a court. ತಾವು ತಪ್ಪುದಾರಿಗೆ ಎಳೆಯಬಾರದು. ಪೊಲೀಸ್ ಸ್ಟೇಷನ್ ತರಹ ಅಲ್ಲಿ ಎನ್‌ಕ್ವೈರಿ ಆಗುತ್ತದೆ.

ಅಧ್ಯಕ್ಷರು:- ಆರ್ಡಿನರಿ ಪೊಲೀಸ್ ಸ್ಟೇಷನ್‌ಗೂ, ಲೋಕಾಯುಕ್ತಕ್ಕೂ ಡಿಫೆನ್ಸ್ ಇದೆ.

ಶ್ರೀ ಜಗದೀಶ್ ಶೆಟ್ಟರ್:- ಲೋಕಾಯುಕ್ತ ಇನ್‌ವೆಸ್ಟಿಗೇಷನ್ ಆಫೀಸರ್ ಅಷ್ಟೆ. ಲೋಕಾಯುಕ್ತರು ಏನು ಹೇಳಿದ್ದಾರೆ? ಆ ಬಗ್ಗೆ ನಾವೇನೂ ಮಾತನಾಡುವಂತೆ ಇಲ್ಲವೇ ಈ ವಿಷಯದಲ್ಲಿ?

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ, ತಾವು ಯಾವುದೇ ತೀರ್ಮಾನವನ್ನು ಆ ಪೀಠದಲ್ಲಿ ಕುಳಿತು ತೆಗೆದುಕೊಳ್ಳುವಂತಹ ಸನ್ನಿವೇಶದಲ್ಲಿ ತಾವು ಏನು ಹೇಳಿದರೂ ಅದು ಒಂದು ಪ್ರಸಿಡೆಂಟ್ಸ್ ಆಗುತ್ತವೆ. ಒಂದು ಸಾರಿ ತಾವು ತೆಗೆದುಕೊಂಡ ತೀರ್ಮಾನವನ್ನು ರಿವೈಜ್ ಮಾಡುವಂತಹ ಹಕ್ಕು ಸಹ ತಮಗೆ ಇರುತ್ತದೆ. ಆದರಿಂದ ತಾವು ಯಾವುದೇ ತೀರ್ಮಾನವನ್ನು ಕೊಟ್ಟರೂ ಸಹ ಬಹಳ ವಿಚಾರ ಮಾಡಿ ಇದುವರೆಗೂ ತೀರ್ಮಾನ ಕೊಟ್ಟಿದ್ದೀರಿ, ಮುಂದೆಯೂ ಸಹ ಒಳ್ಳೆಯ ತೀರ್ಮಾನ ಕೊಡುತ್ತೀರಿ ಎನ್ನತಕ್ಕಂಥ ವಿಶ್ವಾಸ ನನಗೆ ಇದೆ. ಈಗ ಯಾವುದೋ ಒಂದು ವಿಚಾರ ನ್ಯಾಯಾಂಗದ ಮುಂದೆ ಇರುವಾಗ ಇಲ್ಲಿ ಚರ್ಚೆ ಮಾಡತಕ್ಕಂಥಾದ್ದು ಅಷ್ಟು ಸೂಕ್ತವಲ್ಲ ಎನ್ನತಕ್ಕಂಥಾದ್ದು ಒಂದು ಪ್ರಿಸಿಡೆಂಟ್‌ನ್ನು ನಾವು ಫಾಲೋ ಮಾಡಿಕೊಂಡು ಬಂದಿದ್ದೇವೆ. ಅದಕ್ಕೆ ನಾನು ಒಪ್ಪುತ್ತೇನೆ. ಈಗ ಟರ್ಮ್ಸ್ ಆಫ್ ರೆಫರೆನ್ಸ್ ಬಗ್ಗೆ ಇರುತ್ತದೆ. ನಿನ್ನೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಅದನ್ನೇ ಹೇಳಿದರು. ಜ್ಯುಡಿಷಿಯಲ್ ಎನ್ ಕ್ವೈರಿಗೆ ನಾವು ಆರ್ಡರ್ ಮಾಡಿದ್ದೇವೆ. ಜುಡಿಷಿಯಲ್ ಎನ್ ಕ್ವೈರಿಗೆ ನೀವು ಆರ್ಡರ್ ಮಾಡಿದ್ದೀರಿ; ಆರ್ಡರ್ ಮಾಡುವ ಅಥಾರಿಟಿ ಯಾವುದು? ಸರ್ಕಾರ. ಸರ್ಕಾರ ಈ ಮನೆ ಕ್ರಿಯೇಟ್ ಮಾಡಿದ್ದು ತಾನೆ? ಆದ್ದರಿಂದ ಅದನ್ನು ಮಾಡಬೇಕಾದರೆ ಈ ಹೌಸ್‌ನಲ್ಲಿ ಟರ್ಮ್ಸ್ ಆಫ್ ರೆಫರೆನ್ಸ್ ಏನು ಎನ್ನತಕ್ಕಂಥಾದ್ದನ್ನು ನಾವು ಹೇಳುವುದಕ್ಕೆ ಹಕ್ಕು ಇದೆಯೋ ಇಲ್ಲವೋ? ಸಲಹೆಗಳನ್ನು ಸರ್ಕಾರಕ್ಕೆ ಕೊಡುವುದಕ್ಕೆ ಹಕ್ಕು ಇದೆಯೋ ಇಲ್ಲವೋ? ಅದೇ ರೀತಿಯಲ್ಲಿ ಲೋಕಾಯುಕ್ತ ಯಾವುದೋ ಒಬ್ಬ ಇಂಜಿನಿಯರ್ ಬಗ್ಗೆ ಯಾವುದೋ ಒಂದು ವಿಚಾರದಲ್ಲಿ ಒಂದು ಅವ್ಯವಹಾರದ ಬಗ್ಗೆ ಅವರು ವಿಚಾರಣೆ ಮಾಡಲಿ, ಹಾಗೆ ಆ ವಿಚಾರಣೆ ಮಾಡತಕ್ಕಂಥಾದ್ದರಲ್ಲಿ ಯಾರದ್ದೂ ತಕರಾರು ಇಲ್ಲ. ಆದರೆ ಯಾವುದು ಬಿಟ್ಟು ಹೋಗಿದೆ, ಯಾವುದು ಲೋಕಾಯುಕ್ತರ ಎನ್‌ಕ್ವೈರಿಗೆ ಫೆಲಿಸಿಟೇಟ್ ಮಾಡುತ್ತದೆ ಅಂಥಾದ್ದನ್ನು ಹೇಳತಕ್ಕಂಥ ಹಕ್ಕು ನಮಗೆ ಇದೆ. ಈಗ ಏನಾಗುತ್ತದೆ

ಅಂದರೆ ಮಾನ್ಯ ಅಧ್ಯಕ್ಷರೇ, ಇನ್ನು ಮೇಲೆ a day may come ಕೋಟ್ಯಾಂತರ ರೂಪಾಯಿ ದರೋಡೆ ಮಾಡಿಬಿಡುವುದು, ಯಾವುದೋ ಒಂದು ಪಬ್ಲಿಕ್ ಇಂಟ್ರೆಸ್ಟ್ ಲಿಟಿಗೇಷನ್ ಎಂದು ಕೋರ್ಟಿನಲ್ಲಿ ಹಾಕಿಬಿಡುವುದು, ಅದನ್ನು ನಾವು ಚರ್ಚೆಯೇ ಮಾಡುವಂತೆ ಇಲ್ಲ. ಅದು 5 ವರ್ಷಗಳೋ 10 ವರ್ಷಗಳೋ ಆಗುತ್ತದೆ, ಸಾಕ್ಷಿಗಳು ಸತ್ತು ಹೋಗುತ್ತಾರೆ, ಈ ಕಡೆ ಚರ್ಚೆಯೂ ಆಗಲಿಲ್ಲ, ಸರ್ಕಾರ ಕ್ರಮ ತೆಗೆದುಕೊಳ್ಳಲಿಲ್ಲ, ಅದೇ ರೀತಿಯ ದರೋಡೆ ನಡೆದುಕೊಂಡು ಹೋಗುತ್ತದೆ. ಆದ್ದರಿಂದ ನಾವು ಅದನ್ನು ಹಾಗೆಯೇ ಬಿಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ತಾವು ದಯವಿಟ್ಟು ಲೋಕಾಯುಕ್ತ ಅಂದ ತಕ್ಷಣವೇ ನಮ್ಮ ಮಾನ್ಯ ಸದಸ್ಯರಾದ ಸೋಮಶೇಖರ್‌ರವರು ಬಹಳ ಪ್ರಮುಖವಾಗಿರತಕ್ಕ ವಿಚಾರವನ್ನು ಹೇಳಿದ್ದಾರೆ. ಮಾನ್ಯ ಸುರೇಶ್ ಕುಮಾರ್‌ರವರು ಹೇಳಿದ್ದಾರೆ. ಲೋಕಾಯುಕ್ತ ಎನ್ ಕ್ವೈರಿಂಗ್ ಅಥಾರಿಟಿ. ಅವರು ಪನಿಷಿಂಗ್ ಮಾಡುವ ಅಥಾರಿಟಿ. ಸಸ್ಪಂಡ್ ಮಾಡುವುದಕ್ಕೆ ಮತ್ತೊಂದು ಮಾಡುವುದಕ್ಕೆ ಇರುವುದು. Suspension is not a Punishment. ಎಂದೂ ಸಹ ಹೇಳಿದ್ದಾರೆ. ಸರ್ಕಾರಕ್ಕೆ ಸಲಹೆಗಳನ್ನು ಕೊಡತಕ್ಕಂಥ ಅಥಾರಿಟಿ ಇದೆ. ಆದ್ದರಿಂದ ಲೋಕಾಯುಕ್ತರ ಮುಂದೆ ಕೇಸ್ ಇದೆ ಎನ್ನತಕ್ಕಂಥ ನೆಪದಲ್ಲಿ ತಾವು ಆ ಸ್ಥಾನದಲ್ಲಿ ಕುಳಿತಿರುವಾಗ, ತಾವು ಒಂದು ತೀರ್ಮಾನ ತೆಗೆದುಕೊಳ್ಳುವಾಗ ಲೋಕಾಯುಕ್ತರ ಮುಂದೆ ಇರತಕ್ಕಂಥ ಅಂಶವನ್ನು ಬಿಟ್ಟು, ಆ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ನಾವು ಇನ್ನೂ ಹೆಚ್ಚು ವಿಚಾರಗಳನ್ನು ನಾವೇನು ಹೇಳುತ್ತೇವೆ ಅದನ್ನು ನೋಡಿ. ಅವರು ಏನು ಕ್ರಮ ತೆಗೆದುಕೊಂಡಿದ್ದಾರೆ. ಲೋಕಾಯುಕ್ತರವರಿಗೆ ರೆಫರ್ ಮಾಡಿದ್ದೇವೆಂದು ಹೇಳಿದರು. We appreciate that.

ಅಧ್ಯಕ್ಷರು:- 3 ಜನ ಇಂಜಿನಿಯರ್ಸ್ ನ್ನು ಸಸ್ಪೆಂಡ್ ಮಾಡಿದ್ದಾರೆಂದು ಹೇಳಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಲೋಕಾಯುಕ್ತಕ್ಕೆ ಹೆಚ್ಚಿನ ಶಕ್ತಿ ಕೊಡಬೇಕು, ಮತ್ತೊಂದು ಮಾತನ್ನು ಮಾನ್ಯ ಸಭಾನಾಯಕರು ಹೇಳಿದ್ದಾರೆ. ಲೋಕಾಯುಕ್ತ ಮುಂದೆ ಇರತಕ್ಕಂಥ ವಿಚಾರಗಳನ್ನು ಸಹ ಚರ್ಚೆಗೆ ತರಬಹುದು, ನಮ್ಮದು ಟ್ರಾನ್ಸ್ ಪರೆಂಟ್ ಸರ್ಕಾರ ಆಗಿರುವುದರಿಂದ ನಾವು ಚರ್ಚೆಗೆ ಸಿದ್ದರಿದ್ದೇವೆಂದು ಹೇಳಿದ್ದಾರೆ. ಅದೂ ತಮಗೆ ಗೊತ್ತಿರತಕ್ಕಂಥ ವಿಚಾರ. ಹೀಗಿರುವಾಗ ಮಾನ್ಯ ಮುಖ್ಯಮಂತ್ರಿಗಳು ಅಡ್ಮಿಟ್ ಮಾಡಿಕೊಂಡಿದ್ದಾರೆ. ಮೊನ್ನೆ ಕೌನ್ಸಿಲ್‌ನಲ್ಲಿ ಉತ್ತರ ಕೊಡುವಾಗ. ಇದು ಯಾವುದೋ ಒಂದು ಸಣ್ಣ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಆಗುವುದಿಲ್ಲವೆಂದರೆ ಹೇಗೆ?

ಶ್ರೀ ಡಿ.ಬಿ. ಚಂದ್ರೇಗೌಡ:- ಶೂನ್ಯ ವೇಳೆಯಲ್ಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಅದನ್ನು ಹೇಳಿ ತಾವ್ರ. ಶೂನ್ಯ ವೇಳೆಯಲ್ಲಿ ಬೇಡ, ಬೇರೆ ಯಾವುದಾದರೊಂದು ರೀತಿಯಲ್ಲಿ ತನ್ನಿ ಎಂದು ಹೇಳಿ. ಅದನ್ನು ನಾವು ಒಪ್ಪಿಕೊಳ್ಳೋಣ. ಅದರೆ ತಾವು ಪಾರ್ಲಿಮೆಂಟರಿ ಅಫೇರ್ ಮಿನಿಸ್ಟರ್ ಆಗಿದ್ದುಕೊಂಡು ಛೇರ್‌ಗೆ ತಾವು ಸಲಹೆ ಕೊಡತಕ್ಕಂಥ ಸಂದರ್ಭದಲ್ಲಿ ಲೋಕಾಯುಕ್ತ ಮುಂದೆ ಇರತಕ್ಕಂಥಾದ್ದನ್ನು ಚರ್ಚೆ ಮಾಡಬಾರದು ಎನ್ನತಕಕ್ಕಂಥ.....

ಶ್ರೀ ಡಿ.ಬಿ. ಚಂದ್ರೇಗೌಡ:- ನಿಯಮಗಳನ್ನು ತಮ್ಮ ಗಮನಕ್ಕೆ ತಂದೆ ಅಷ್ಟೇ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಅದು ತಮ್ಮ ಕರ್ತವ್ಯ.

ಶ್ರೀ ಡಿ.ಬಿ. ಚಂದ್ರೇಗೌಡ:- ಅದನ್ನೇ ಮಾಡಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಆದ್ದರಿಂದ ಮಾನ್ಯ ಅಧ್ಯಕ್ಷರೇ, ತಾವು ತೀರ್ಮಾನ ಕೊಡುವಾಗ ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡರೆ ....

ಶ್ರೀ ಡಿ.ಬಿ. ಚಂದ್ರೇಗೌಡ:- ತಾವು ಅರ್ಧಂಬರ್ಧ ಕೇಳಿದಿರಿ. ಈ ವಿಚಾರ ಶೂನ್ಯ ವೇಳೆಯಲ್ಲಿ ಬಂದಿರತಕ್ಕಂಥ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಲೋಕಾಯುಕ್ತರಿಗೆ ಫೆಲಿಸಿಟೇಟ್ ಮಾಡುವುದಕ್ಕೆ ಅವರು ವಿಚಾರ ಎತ್ತಿರುವುದು. ದಯವಿಟ್ಟು ಆಲೋ ಮಾಡಿ ಸ್ವಾಮಿ.

ಅಧ್ಯಕ್ಷರು:- ಮಾನ್ಯ ಚಂದ್ರೇಗೌಡರು ಏನು ಹೇಳಿದರು? ಶೂನ್ಯ ವೇಳೆಯಲ್ಲಿ ಲೋಕಾಯುಕ್ತರಿಗೆ ರೆಫರ್ ಮಾಡಿರುವ ವಿಷಯವನ್ನು ತಾವು ರೈಜ್ ಮಾಡಬಹುದಾ? ಅವರು ಹೇಳಿರುವುದು ಅದೇ ತಾನೇ ಸ್ವಾಮಿ?

ಶ್ರೀ ಡಿ.ವಿ. ಸದಾನಂದಗೌಡ:- ನಿಮ್ಮ ತೀರ್ಮಾನಕ್ಕೆ ನಾನು ಬದ್ಧ.

ಅಧ್ಯಕ್ಷರು:- ಅದಕ್ಕೋಸ್ಕರವೇ ನನ್ನ ತೀರ್ಮಾನಕ್ಕೆ ಬದ್ಧವಾಗಿರುವುದರಿಂದ ನಾನು ಹೇಳುವುದು ಇಷ್ಟೇ. ಶೂನ್ಯ ವೇಳೆಯಲ್ಲಿ ಲೋಕಾಯುಕ್ತಕ್ಕೆ ರೆಫರ್ ಮಾಡಿರುವ ವಿಷಯಗಳನ್ನು ನಾವು ಇಲ್ಲಿ ಚರ್ಚೆ ಮಾಡಬಹುದಾ?

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ:- ಭ್ರಷ್ಟಾಚಾರಗಳನ್ನು ಮುಚ್ಚಿಡಲು ಪ್ರಯತ್ನ ಪಡುತ್ತಿದ್ದಾರೆ. ....

ಅಧ್ಯಕ್ಷರು:- ಅದರ ಬಗ್ಗೆ ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ತಾವು ನನ್ನ ಕಡೆ ಕೈ ತೋರಿಸಬೇಡಿ. ನಾವು ನಿಮ್ಮಂದ ಭ್ರಷ್ಟಾಚಾರದ ಪಾಠ ಕಲಿಯಬೇಕಾಗಿಲ್ಲ. ನಾವು ನಮ್ಮ ಕರ್ತವ್ಯವನ್ನು ಮಾಡುತ್ತಿದ್ದೇವೆ. ಮಾತನಾಡುವಾಗ ಸ್ವಲ್ಪ ಎಚ್ಚರಿಕೆಯಿಂದ ಮಾತನಾಡಬೇಕು. This is not the way. Try to behave yourself. I have done my duty. I have brought it to the notice of the Hon.Speaker.

(ಗೊಂದಲ)

ನಾನು ಈ ವಿಚಾರದಲ್ಲಿ ಚರ್ಚೆಗೆ ಅವಕಾಶ ಕೊಡಬೇಡಿ ಎಂದು ಹೇಳಿಲ್ಲ. ಈ ವಿಚಾರವನ್ನು ಮುಚ್ಚಿಡತಕ್ಕಂಥ ಕೆಲಸ ಮಾಡುತ್ತಿಲ್ಲ. ಈ ತರಹ ಕೂಗತಕ್ಕಂಥಾದ್ದನ್ನು ನಿಲ್ಲಿಸಬೇಕು. ಅದಕ್ಕೆ ಒಂದು ಲಿಮಿಟ್ ಇರಬೇಕು. ನಾವೂ ಸಹ 25-30 ವರ್ಷಗಳಿಂದ ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡಿದ್ದೇವೆ. ಸಂಸತ್‌ನಲ್ಲಿ, ಶಾಸನಸಭೆಗಳಲ್ಲಿ ಈ ರೀತಿ ನಾವು ಕೂಗುವುದಕ್ಕೆ ಹೋಗಿಲ್ಲ. ನನ್ನ ಕರ್ತವ್ಯವನ್ನು ನಾನು ಮಾಡಿದ್ದೇನೆ. ಎರಡು ಅಂಶಗಳನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಒಂದು ಈ ವಿಚಾರವನ್ನು ಲೋಕಾಯುಕ್ತಕ್ಕೆ ಎನ್‌ಕ್ವೈರಿಗಾಗಿ ಸರ್ಕಾರ ಕಳುಹಿಸಿ ಕೊಟ್ಟಿದೆ. ಎರಡು, ಇವರು ಸ್ವಾಯತ್ತ ಸಂಸ್ಥೆಗಳು, ಈ ಸಂಸ್ಥೆಗಳಲ್ಲಿ ನಡೆಯತಕ್ಕಂಥ ಅವ್ಯವಹಾರಗಳನ್ನು ಈ ಸದನದಲ್ಲಿ ಪದೇ ಪದೇ ಚರ್ಚೆ ಮಾಡುವುದರಿಂದ ಸ್ವಾಯತ್ತತೆಗೆ ಧಕ್ಕೆ ಬಂದೀತು ಎನ್ನುವುದಕ್ಕೆ ಏನಾದರೂ ಒಂದು ನಿಯಂತ್ರಣವನ್ನು ನಾವು ಹಾಕಿ ಕೊಳ್ಳಬೇಕು ಎಂದು ಹೇಳಿದ್ದೇನೆ. ಮಾನ್ಯ ಅಧ್ಯಕ್ಷರೇ, ಪ್ರತಿದಿನ ಈ ಸದನದಲ್ಲಿ ಇದು ನಡೆಯುತ್ತಿದೆ. ಇಂಥಾದ್ದನ್ನು ಇನ್ನು ಮುಂದೆ ಅಲೋ ಮಾಡಬಾರದು. ಸರ್ಕಾರದ ವಿರುದ್ಧ ಪ್ರತಿನಿತ್ಯ ಇಂಥಾದ್ದು ಒಂದನ್ನು ತಂದು ಹಾಕುವುದು ಚರ್ಚೆ ಮಾಡುವುದು; Are we not here to protect the Government? ನನ್ನ ಕರ್ತವ್ಯವನ್ನು ನಾನು ಮಾಡಿದ್ದೇನೆ.

ಶ್ರೀ ಬಿ. ಸೋಮಶೇಖರ್:- ಮಾನ್ಯ ಅಧ್ಯಕ್ಷರೇ, ತಾವು ತಮ್ಮ ತೀರ್ಪು ಕೊಡುವುದಕ್ಕೆ ಮೊದಲೇ ನಮ್ಮದು ಎರಡು ಮನವಿ ಇದೆ. ಕಳೆದ ಎರಡೂ ಎರಡೂವರೆ ವರ್ಷಗಳಿಂದ ತಾವು ತೀರ್ಪುಗಳನ್ನು ಯಾವ ರೀತಿ ಕೊಡುತ್ತಿದ್ದೀರಿ, ಏನು ಕೆಲಸಗಳನ್ನು ಇಲ್ಲಿ ನಾವು ಮಾಡುತ್ತಿದ್ದೇವೆ, ಯಾವ ಯಾವ ರೀತಿ ಮುಂದಕ್ಕೆ ಹೋಗುತ್ತಿವೆ ಎನ್ನುವುದನ್ನು ನೋಡಿದ್ದೇನೆ. 2-3 ಸದನಗಳಲ್ಲಿ ಯಾವುದೋ ಒಂದು ಕ್ಲಿಷ್ಟ ಪರಿಸ್ಥಿತಿ ಬಂದಾಗ ನಾವು ಯಾವುದೋ ಒಂದು ವಿಚಾರ ಎತ್ತಿದಾಗ ಶೂನ್ಯ ವೇಳೆಯಲ್ಲಿ ಬರುತ್ತದೆಯೋ ಇಲ್ಲವೋ ಅದನ್ನು ನಾನು ತೀರ್ಪು ಕೊಡುತ್ತೇನೆಂದು ಮುಂದಕ್ಕೆ ಹಾಕುವುದು. ಅದು ಮುಂದೆ ಎರಡು ಸದನಗಳವರೆಗೂ ಬರಲೇಬಾರದು, ನಿನ್ನೆ ದಿವಸ ಒಂದು ಬಹಳ ಪ್ರಮುಖವಾದ ವಿಚಾರವನ್ನು ನಾವು ಎತ್ತಿದೆವು. ಝಳಕಿಯಲ್ಲಿ ಫೈರಿಂಗ್ ಆಗಿ 4 ಜನ ಸತ್ತರು. ಅದು ಸಣ್ಣ ವಿಚಾರವೇನೂ ಅಲ್ಲ. ಅದು ನ್ಯಾಯವಾಗಿ ನಿಲುವಳಿ ಸೂಚನೆಯಲ್ಲಿ ತರತಕ್ಕಂಥ ವಿಚಾರ. ಅಂಥಾದ್ದನ್ನು ನಾವು ಎತ್ತಿದಾಗ ತಾವು ಇದನ್ನು ಯಾವ ರೀತಿ ತೀರ್ಮಾನ ಮಾಡಬೇಕು. ಮಾನ್ಯ ಮಂತ್ರಿಗಳು ಹೇಳಿದರು ನ್ಯಾಯಾಂಗ ತನಿಖೆಗೆ ಆದೇಶ ಮಾಡಿದ್ದೇವೆಂದು, ಅದರೆ ನ್ಯಾಯಾಂಗ ತನಿಖೆಗೆ ಆರ್ಡರ್ ಇನ್ನೂ ಆಗಿಲ್ಲ. ಘೋಷಣೆ ಮಾಡಿದ್ದೇವೆ ಆದ್ದರಿಂದ ಆ ವಿಚಾರ ಚರ್ಚೆ ಮಾಡಬಾರದು ಎಂದು ಹೇಳಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು, ಅದಕ್ಕೆ ತಾವು ನಾನು ತೀರ್ಪು ಕೊಡುತ್ತೇನೆಂದು ಮುಂದಕ್ಕೆ ಹಾಕಿದಿರಿ.

ಅಧ್ಯಕ್ಷರು:- ರೂಲಿಂಗ್ ನಿನ್ನೆಯೇ ರೆಡಿಯಾಗಿತ್ತು; ಸಮಯ ಸಿಗಲಿಲ್ಲ. ಫೋಸ್ಟ್ ಫೋನ್ ಮಾಡಲಿಲ್ಲ. ರೂಲಿಂಗ್ ಕೊಡಬೇಕಾದರೆ ಕೌಲ್ ಅಂಡ್ ಶಕ್ದರ್ ಲೋಕಸಭೆಯಲ್ಲಿ ಏನು ತೀರ್ಪು ಕೊಟ್ಟಿದ್ದಾರೆ, ಮತ್ತು ಇಲ್ಲಿ ನಮ್ಮ ಹಿಂದಿನ ಅಧ್ಯಕ್ಷರುಗಳು ಏನು ರೂಲಿಂಗ್ಸ್ ಕೊಟ್ಟಿದ್ದಾರೆ, ಅದನ್ನೆಲ್ಲಾ ನೋಡಬೇಕು ತಾನೆ. All of a sudden ರೂಲಿಂಗ್ ಕೊಟ್ಟರೆ ಏನು ಪ್ರಯೋಜನ ಬಂತು?

ಶ್ರೀ ಬಿ. ಸೋಮಶೇಖರ್:- ಸ್ವಾಯತ್ತ ಸಂಸ್ಥೆಗಳು ಅಂದರೆ ಜಿಲ್ಲಾ ಪಂಚಾಯತಿಗಳು ಇವುಗಳನ್ನು ಈ ಸದನ ಸೃಷ್ಟಿ ಮಾಡಿರುವಂಥಾದ್ದು, ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳನ್ನು ಆಕ್ಟ್ ಮೂಲಕ ಈ ಸದನ ಸೃಷ್ಟಿ ಮಾಡಿರುವ ಸಂಸ್ಥೆಗಳು, ರಾಜ್ಯಗಳು ಲೋಕಸಭೆಯನ್ನು ಕ್ರಿಯೇಟ್ ಮಾಡಿವೆ. ಪಾರ್ಲಿಮೆಂಟ್‌ನಲ್ಲಿ ನಮ್ಮದು ಯಾವುದಾದರೊಂದು ಕಾನೂನು ಉಲ್ಲಂಘನೆಯಾಗಿರತಕ್ಕಂಥಾದ್ದು ರಾಜ್ಯಾಂಗಕ್ಕೆ ಸಂಬಂಧಪಟ್ಟಿರತಕ್ಕಂಥಾದ್ದು ಇದ್ದರೆ ಚರ್ಚೆ ಮಾಡುತ್ತಾರೆ.

ನಾವು ಕ್ರಿಯೇಟ್ ಮಾಡಿದಂಥ ಸಮಿತಿಗಳಲ್ಲಿ ಅವ್ಯವಹಾರ ನಡೆದಾಗ, ನಾವು ಯಾವ ಚೌಕಟ್ಟಿನಲ್ಲಿ ರಚನೆ ಮಾಡಿದ್ದೇವೆ, ಆ ಚೌಕಟ್ಟಿನ ಪ್ರಕಾರ ಕೆಲಸ ಮಾಡದೇ ಇದ್ದಾಗ ಆ ಅಧ್ಯಕ್ಷರನ್ನೇ ಆಗಲೀ, ಆ ಸಂಸ್ಥೆಗಳ ಮೇಲೆ ಕ್ರಮ ತೆಗೆದುಕೊಳ್ಳತಕ್ಕ ವಿಚಾರ ಈ ಸದನಕ್ಕೂ ಇದೆ ಎಂಬುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಆದ್ದರಿಂದ ತಾವೇನು ಸ್ವಾಯತ್ತ ಸಂಸ್ಥೆಗಳು ಎಂದು ಹೇಳುತ್ತೀರಿ, ಅವುಗಳಿಗೆ ದುಡ್ಡು ರಿಲೀಸ್ ಮಾಡತಕ್ಕಂಥವರು ನಾವು, ಅಲ್ಲಿ ಅವ್ಯವಹಾರಗಳಾದರೆ ಮಾತನಾಡುವುದು ಬೇಡವೇ? It is not tenable acording to the Constitution. ಇನ್ನೊಂದೆರಡು ವಿಚಾರಗಳೇನಿವೆ, ನಮ್ಮ ಲೋಕಾಯುಕ್ತ, ಅದೊಂದು ಇನ್ ಮೆಸ್ಟಿಗೇಷನ್ಸ್ ಏಜೆನ್ಸಿ. ಅವರೇನು ಹೇಳುತ್ತಿದ್ದಾರೆ, ಜ್ಯುಡಿಷಿಯರಿ ತೀರ್ಪು ಕೊಡತಕ್ಕಂಥಾದ್ದು ಅಲ್ಲ. It is just like another COD. ಇದಕ್ಕೆ ಜಡ್ಜನ್ನು ಅಪಾಯಿಂಟ್ ಮಾಡಿದ್ದೀರಿ. ಮತ್ತೆ ಇನ್‌ಸ್ಪೆಕ್ಟರುಗಳು ಇರುತ್ತಾರೆ. ನೂರಾರು ಪೊಲೀಸ್ ಸ್ಟೇಷನ್‌ಗಳದ್ದು ರೆಫರ್ ಆಗುತ್ತಾ ಇರುತ್ತದೆ. ಅಸಿಸ್ಟೆಂಟ್ ಕಮಿಷನರ್ ಮುಂದೆ ಇರುತ್ತವೆ. ಜಿಲ್ಲಾಧಿಕಾರಿಗಳ ಮುಂದೆ ಸ್ಟಾಚ್ಯುಟರಿ ಫಂಕ್ಷನ್ಸ್ ಬಗ್ಗೆ ಅವರು ತೀರ್ಪು ಕೊಡುತ್ತಾ ಇರುತ್ತಾರೆ. ಹಾಗಾದರೆ ಎಲ್ಲಾ ವಿಚಾರಗಳನ್ನೂ ಆ ಕೋರ್ಟ್ ಮುಂದೆ ಇದೆ, ಜ್ಯುಡಿಷಿಯಲ್ ಕೋರ್ಟ್ ಮುಂದೆ ಇದೆ, ಸ್ಟೇಷನ್‌ನಲ್ಲಿ ಇದೆ ಎಂದು ಹೇಳಿದರೆ, ನಾವು ಚರ್ಚೆ ಮಾಡುವುದೇ ಬೇಡವೆಂದು ಹೇಳುವುದಾದರೆ, ಈ ಪ್ರಜಾಪ್ರಭುತ್ವದ ಸಂಸ್ಥೆಯಾದಂಥ ಈ ಸದನದಲ್ಲಿ ನಾವೇನು ಚರ್ಚೆ ಮಾಡುವುದು? ನಾನು ನೋಡುತ್ತಲೇ ಇದ್ದೇನೆ. ಏನಾದರೊಂದು ಭ್ರಷ್ಟಾಚಾರ ವಿಷಯವನ್ನು ನಾವು ಎತ್ತಿಬಿಟ್ಟರೆ, ನಿಮಗೆ ಇರಿಸುಮುರಿಸು ಆಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ನೀವು ಸಾಕಷ್ಟು ಅನುಭವಿ ಸದಸ್ಯರಿದ್ದೀರಿ. ದಯವಿಟ್ಟು ಕೇಳಿ, ಇದೊಂದು presumption. ನಾನು ಹೇಳಿದ್ದು ಏನೆಂದರೆ, ನೀವು ಬಹಳ ಉದ್ದಕ್ಕೆ, ವಿಸ್ತಾರವಾಗಿ ಚರ್ಚೆ ಮಾಡುತ್ತಿದ್ದೀರಿ. ಇಲ್ಲಿ ಯಾರೂ ತಪ್ಪುದಾರಿಗೆ ಎಳೆದಿಲ್ಲ. ನೀವು ಚರ್ಚೆ ಮಾಡಬೇಡಿ ಎಂದು ಹೇಳಿಲ್ಲ. ಯಾವುದನ್ನು ಶೂನ್ಯ ವೇಳೆಯಲ್ಲಿ ಚರ್ಚೆ ಮಾಡಬೇಕು ಎನ್ನತಕ್ಕಂಥಾದ್ದು. ಈ ಸ್ವಾಯತ್ತ ಸಂಸ್ಥೆಗಳಲ್ಲಿ ಆಗಿರತಕ್ಕಂಥ ಅವ್ಯವಹಾರಗಳನ್ನು ಚರ್ಚೆ ಮಾಡುವುದಕ್ಕೆ ನಿಯಮಗಳಲ್ಲಿ ಬೇಕಾದಷ್ಟು ಅವಕಾಶ ಇದೆ. ಇದನ್ನು ಮೂರು ದಿವಸಗಳಿಂದ ಹೇಳುತ್ತಲೇ ಇದ್ದೇನೆ. I am waiting for the Speaker's ruling. Let us go according to the rule book.

ಅಧ್ಯಕ್ಷರು:- ಅದನ್ನು ಬಿಟ್ಟು ಮಾತನಾಡುವುದಕ್ಕೆ ಆಗುವುದೇ ಇಲ್ಲ.

ಶ್ರೀ ಬಿ. ಸೋಮಶೇಖರ್:- ನಮ್ಮ ನಾಯಕರು ಹೇಳಿದ ಹಾಗೆ, ಇದರ ಬಗ್ಗೆ ತೀರ್ಪು ಕೊಡುವಾಗ. ತಮ್ಮ ತೀರ್ಪಿಗೆ ನಾವು ಗೌರವಿಸುತ್ತೇವೆ. ಆದರೆ, ಆ ತೀರ್ಪನ್ನು

ಬೇರೆಯವರು .ಯಾರೂ ಸಹ ಟೀಕೆ ಮಾಡತಕ್ಕಂಥ ರೀತಿಯಲ್ಲಿ ಇರಬಾರದು ಎಂಬುದು ನಮ್ಮ ಆಸೆ. ಈ ಸದನದ ಗೌರವವನ್ನು ಕಾಪಾಡಬೇಕಾಗುತ್ತದೆ. ಆದ್ದರಿಂದ, ತಾವು ಅವಕಾಶ ಕೊಡಬೇಕೆಂದು ನನ್ನ ಮನವಿ.

ಶ್ರೀ ಜಗದೀಶ್ ಶೆಟ್ಟರ್:- ಇಲ್ಲಿ ಮಾನ್ಯ ಸದಾನಂದಗೌಡರು ಯಾವ ವಿಷಯವನ್ನು ಎತ್ತುವಂಥಾದ್ದು ಇತ್ತು, ಅವರು ಇನ್ನೂ ಪೂರ್ತಿ ಪ್ರಸ್ತಾಪವನ್ನೇ ಮಾಡಿರಲಿಲ್ಲ. ಮುಖ್ಯವಾಗಿ ಅವರು ಹೇಳುತ್ತಾ ಇದ್ದರು. ಲೋಕಾಯುಕ್ತಕ್ಕೆ ರೆಫರ್ ಮಾಡಿರುವಂಥ ಮಾಹಿತಿ ಇದೆ ಎಂಬುದನ್ನು ಮಾನ್ಯ ಚಂದ್ರೇಗೌಡರು ಹೇಳಿದರು. ಅದರ ಬಗ್ಗೆ ಸ್ಪೆಸಿಫಿಕ್ ಆದಂಥ ಮಾಹಿತಿಯನ್ನು ಅವರಿನ್ನೂ ಸದನದ ಮುಂದೆ ಹೇಳಿಲ್ಲ. ಆಕಸ್ಮಾತ್ ಈಗ ಲೋಕಾಯುಕ್ತಕ್ಕೇ ರೆಫರ್ ಆಗಿದ್ದರೂ, ಅವರು ಎತ್ತುವಂಥ ಪ್ರಶ್ನೆ, ಅಲ್ಲಿ ಎಲ್ಲಾ ಕಾಗದಪತ್ರಗಳೂ ಜಿಲ್ಲಾ ಪಂಚಾಯ್ತಿಯ ಅಧ್ಯಕ್ಷರ ಕೈವಶದಲ್ಲಿವೆ. ನೀವು ರೆಫರ್ ಮಾಡಿರಬಹುದು. ಅದರಲ್ಲಿ ಜಿಲ್ಲಾ ಪಂಚಾಯ್ತಿಯ ಅಧ್ಯಕ್ಷರ ಇನ್‌ವಾಲ್ವ್‌ಮೆಂಟ್ ಇದೆಯೆಂಬ ಆಪಾದನೆ ಮಾಡುತ್ತಿದ್ದರು. ಇಲ್ಲಿ ಒಂದು ಪ್ರಶ್ನೆ ಬರುವಂಥಾದ್ದು ತುರ್ತಾಗಿ ಈ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬೇಕೆಂದರೆ, ಅಲ್ಲಿಯ ಜಿಲ್ಲಾ ಪಂಚಾಯ್ತಿಯ ಅಧ್ಯಕ್ಷರೇ ಇನ್‌ವಾಲ್ವ್ ಇದ್ದಂಥ ಸಂದರ್ಭದಲ್ಲಿ, ನಾಳೆ ಎಲ್ಲಾ ಕಾಗದಪತ್ರಗಳನ್ನು ನಾಶ ಮಾಡುವಂಥ ಸಂಭವ ಇದೆ; ಆ ಒಂದು ಹೆದರಿಕೆ ಇದೆ. ಸರ್ಕಾರ ತಕ್ಷಣ ಸೀಜ್ ಮಾಡಿ, ಲೋಕಾಯುಕ್ತಕ್ಕೆ ಕಳುಹಿಸುವಂಥ ವ್ಯವಸ್ಥೆ ಮಾಡಬೇಕಾಗುತ್ತದೆ. ಅದಕ್ಕಾಗಿ ತೀವ್ರಗತಿಯಿಂದ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದರು. ಇಂತಹ ವಿಷಯಗಳು ಮತ್ತು ಸನ್ನಿವೇಶ ಇದ್ದಂಥ ಸಂದರ್ಭದಲ್ಲಿ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ. ಆ ದೃಷ್ಟಿಯಿಂದ ಮಾನ್ಯ ಸದಾನಂದಗೌಡರು ಪ್ರಸ್ತಾಪ ಮಾಡಿದ್ದಾರೆ. ದಯವಿಟ್ಟು ಅಂತಹ ವಿಷಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು:- ಈಗ ಎರಡೂ ಕಡೆ ಅಂದರೆ, ಆಡಳಿತ ಪಕ್ಷದವರು ಸಂಸದೀಯ ಸಚಿವರು ಮತ್ತು ವಿರೋಧ ಪಕ್ಷಗಳವರ ವಿಷಯವನ್ನು ನಾನು ಕೇಳಿದ್ದೇನೆ. ನಮ್ಮ ಮುಂದೆ ಇರುವ ಒಂದೇ ಒಂದು ವಿಷಯ ಏನೆಂದರೆ ಶೂನ್ಯವೇಳೆಯಲ್ಲಿ ಸಬ್ ಜ್ಯುಡೀಸ್ ಆಗುವಂಥ ವಿಷಯಗಳು ಅಥವಾ ಲೋಕಾಯುಕ್ತಕ್ಕೆ ರೆಫರ್ ಮಾಡಿರುವಂಥ ವಿಷಯಗಳ ಬಗ್ಗೆ ನಾವು ಡಿಸ್‌ಕಸ್ ಮಾಡಬಹುದೇ ಎಂದು ಮಾನ್ಯ ಮಂತ್ರಿಗಳು ಕೇಳಿದ್ದಾರೆ. ತಾವು ಕೇಳುವುದಕ್ಕೆ ರೂಲ್ಸ್ ಪ್ರಕಾರ ಬೇಕಾದಷ್ಟು ಬೇರೆ ಮಾರ್ಗಗಳು ಇವೆ.

ಶ್ರೀ ಜಗದೀಶ್ ಶೆಟ್ಟರ್:- ತಾವು ತೀರ್ಮಾನ ಕೊಡುವ ಮುಂಚೆ, ಶೂನ್ಯವೇಳೆಯಲ್ಲಿ ಯಾವ ವಿಷಯಗಳನ್ನು ಪ್ರಸ್ತಾಪ ಮಾಡುತ್ತಾರೆ, ಆ ವಿಷಯಗಳ ತೀವ್ರತೆಯನ್ನು ತಿಳಿದುಕೊಂಡು, ಲೋಕಾಯುಕ್ತರಲ್ಲಿದೆ, ಕೋರ್ಟ್‌ನಲ್ಲಿದೆ ಎಂಬುದನ್ನೇ ಕಂಡೀಷನ್ ಹಾಕುವುದು ಬೇಡ.

ಶ್ರೀ ಸಿ. ಚೆನ್ನಿಗಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಅಲ್ಲಿ ಕೋಟ್ಯಾಂತರ ರೂಪಾಯಿಗಳ ಅನ್ಯಾಯವಾಗಿದೆ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳುತ್ತೇವೆ. ಅದಕ್ಕೂ ಅವಕಾಶ ಕೊಡದೇ ಇದ್ದರೆ, ಈ ಸದನ ಏಕೆ ಇರಬೇಕು ಅಧ್ಯಕ್ಷರೇ?

ಅಧ್ಯಕ್ಷರು:– ಕೆಲವು ಮಾರ್ಗಗಳು ಇವೆ. ಯಾವ ರೀತಿ ಕೇಳಬೇಕು? ಎಲ್ಲಿ ಕೇಳಬೇಕು, ಯಾವುದನ್ನು ಕೇಳಬೇಕು ಎಂದು ಕೆಲವು ಮಾರ್ಗಗಳು ಇವೆ; ರೂಲ್ಸ್‌ಗಳು ಇವೆ.

ಶ್ರೀ ಆರಗ ಜ್ಞಾನೇಂದ್ರ:– ಆವರ ಮಾರ್ಗದಲ್ಲೇ ಅವರು ಹೋಗಿದ್ದಾರೆ.

(ಗೊಂದಲ)

ಅಧ್ಯಕ್ಷರು:– ನಮ್ಮ ಮುಂದೆ ಇರುವುದು, ಶೂನ್ಯವೇಳೆಯಲ್ಲಿ ಸಬ್ ಜ್ಯುಡೀಸ್ ಆಗತಕ್ಕ ವಿಷಯವನ್ನು ಡಿಸ್‌ಕಸ್ ಮಾಡಬಹುದೇ ಇಲ್ಲವೇ ಎಂಬುದೇ ಪ್ರಶ್ನೆ, ಬೇರೆ ಮಾರ್ಗಗಳು ಇರುವಾಗ ಇಲ್ಲಿ ಏಕೆ ಮಾಡುತ್ತೀರಿ ಎಂದು. ಇದಕ್ಕೆ ನನಗೆ ಸ್ವಲ್ಪ ಸಮಯ ಬೇಕು. ಇದರ ಬಗ್ಗೆ ವಿಷಯಗಳನ್ನೆಲ್ಲಾ ಕೂಲಂಕಷವಾಗಿ ನೋಡಬೇಕು; ಪುಸ್ತಕಗಳನ್ನು ರೆಫರ್ ಮಾಡಬೇಕು. ಸೋಮವಾರ ಅಥವಾ ಮಂಗಳವಾರ ಇದ ಬಗ್ಗೆ ರೂಲಿಂಗ್ ಕೊಡುತ್ತೇನೆ. ಅದರ ಮುಂದೆ ನೋಡಿಕೊಳ್ಳೋಣ, ಆ ಸಬ್ಜೆಕ್ಟ್ ಈಗ ಬೇಡಿ.

- (2) ವಿಷಯ: ಬೆಳಗಾಂ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಭಾಗ್ಯಲಕ್ಷ್ಮಿ ಸಹಕಾರ ಸಕ್ಕರೆ ಕಾರ್ಖಾನೆ ರೈತರಿಗೆ ಕಬ್ಬಿನ ಹಣ ಪಾವತಿ ಮಾಡದೇ ಇರುವ ಬಗ್ಗೆ:-

ಶ್ರೀ ಮಹದೇವ್ ಕೌಜಲಗಿ (ಬೈಲಹೊಂಗಲ):– ಸನ್ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆ ರಾಜ್ಯದಲ್ಲೇ ಒಂದು ಅತಿ ಹೆಚ್ಚಿನ ಸಕ್ಕರೆಯ ಉತ್ಪಾದನೆ ಮಾಡುವಂಥ ಜಿಲ್ಲೆ. ಕಳೆದ ಕೆಲವು ವರ್ಷಗಳಿಂದ ಅನೇಕ ಸಕ್ಕರೆ ಕಾರ್ಖಾನೆಗಳಲ್ಲಿ, ರೈತರು ಬೆಳೆದಂಥ ಬೆಳೆಗೆ ಆಲ್ಲಿಯ ಕಾರ್ಖಾನೆಯವರು ಬಿಲ್ಲನ್ನು ಕೊಡದೇ ಇರುವುದರಿಂದ ನಮ್ಮ ಭಾಗದ ರೈತರು ಬಹಳ ತೊಂದರೆಯಲ್ಲಿ ಸಿಲುಕಿದ್ದಾರೆ. ಬೆಳಗಾಂ ಜಿಲ್ಲೆ ಖಾನಾಪುರ ತಾಲ್ಲೂಕಿನ ಭಾಗ್ಯಲಕ್ಷ್ಮಿ ಸಹಕಾರ ಸಕ್ಕರೆ ಕಾರ್ಖಾನೆಯವರು ಕಳೆದ ಒಂದು ವರ್ಷದಿಂದ ರೈತರಿಗೆ ಯಾವುದೇ ರೀತಿಯಾದಂಥ ಪೇಮೆಂಟನ್ನು ಮಾಡುತ್ತಾ ಇಲ್ಲ. ಸುಮಾರು 8 ಕೋಟಿ ರೂಪಾಯಿಗಳ ಬಾಕಿಯನ್ನು ರೈತರಿಗೆ ಕೊಡಬೇಕಾಗಿದೆ. ರೈತರು 11 ತಿಂಗಳವರೆಗೆ ಅತ್ಯಂತ ಕಷ್ಟದಿಂದ ಕಬ್ಬನ್ನು ಬೆಳೆದು ಕಾರ್ಖಾನೆಗೆ ಕೊಟ್ಟರೆ, ಕಾರ್ಖಾನೆಯವರು ಅವರಿಗೆ ಹಣ ಪಾವತಿ ಮಾಡದೇ ಇರುವುದರಿಂದ ಅನೇಕ ರೀತಿಯಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದರಲ್ಲಿಯೂ ಈ ಬಾರಿ ಬರಗಾಲ; ಮೊದಲೇ ಅವರು ಸಂಕಷ್ಟದಲ್ಲಿದ್ದಾರೆ. ಮತ್ತೆ ಆ ಫ್ಯಾಕ್ಟರಿಯವರು ಹಣವನ್ನು ಕೊಡದೇ ಇರುವುದರಿಂದ ಅವರು ಮತ್ತಷ್ಟು ಸಂಕಷ್ಟದಲ್ಲಿ ಸಿಲುಕಿದ್ದಾರೆ. ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಉಳಿಸಿ ಎಂದು ಆ ಭಾಗದ ರೈತರು ಹಾಗೂ ಅಲ್ಲಿದ್ದಂಥ ಕಾರ್ಮಿಕರು ದಿನಾಂಕ: 15 ರಂದು ಜಿಲ್ಲಾಧಿಕಾರಿಗಳ ಕಛೇರಿಗೆ ಮುತ್ತಿಗೆ ಹಾಕತಕ್ಕ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಅದಕ್ಕೆ ನಾನು, ಈ ಸಂದರ್ಭದಲ್ಲಿ ಸರ್ಕಾರದವರು ಮಧ್ಯ ಪ್ರವೇಶಿಸಿ ಅಲ್ಲಿ ರೈತರಿಗೆ ಆಗುತ್ತಿರುವಂಥ ತೊಂದರೆಯನ್ನು ಹೋಗಲಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಕೇವಲ ರೈತರ ಬಾಕಿಯನ್ನಷ್ಟೇ ಕೊಡುತ್ತಾ ಇಲ್ಲ, ಸುಮಾರು 5 ತಿಂಗಳಿಂದ ಆ ಕಾರ್ಖಾನೆಯಲ್ಲಿ ಯಾರು ಕೆಲಸವನ್ನು ಮಾಡುತ್ತಿದ್ದಾರೆ, ಆ ಕಾರ್ಮಿಕರಿಗೂ ಸಹಿತ ಹಣವನ್ನು ಕೊಟ್ಟಿಲ್ಲ. ಈ ಸಕ್ಕರೆ ಕಾರ್ಖಾನೆ ಕೇವಲ 5 ವರ್ಷಗಳ ಹಿಂದೆ ಪ್ರಾರಂಭವಾದದ್ದು. ಇಲ್ಲಿಯವರೆಗೆ ಯಾವುದೇ ತೊಂದರೆಗಳು ಇಲ್ಲದೇ ಇದ್ದರೂ ಸಹಿತ, ಈ ವರ್ಷ ಈ ಸಕ್ಕರೆ ಕಾರ್ಖಾನೆ ಸುಮಾರು 14 ಕೋಟಿ ರೂಪಾಯಿಗಳ ಬಾಕಿ ಕೊಡಬೇಕಾಗಿದೆ.